ಕಂಡಳು. "ಚಿಕ್ಕವ್ವ ಎಲ್ಲಿ?" ಎಂಬ ನನ್ನ ಪ್ರಶ್ನೆಗೆ ಅವ್ವ ದೊಡ್ಡದಾಗಿ ನಗುತ್ತ, "ಎದುರಿಗೇ ನಿಂತಿದ್ದಾಳಲ್ಲ" ಎಂದಳು. ನಾನು ದಂಗಾದೆ. 'ಮೊಮ್ಮಗಳ ವಯಸ್ಸಿನ ಈ ಮುಗುದೆಯೊಂದಿಗೆ ನನ್ನ ತಂದೆ ವಿವಾಹವಾದನೆ?' ಎಂಬ ಸಣ್ಣದೊಂದು ಯೋಚನೆ ತಲೆಯಲ್ಲಿ ಸುಳಿಯಿತಾದರೂ, ಅದನ್ನು ಹತ್ತಿಕ್ಕಿ ತಿಷ್ಯರಕ್ಷಿತಾಳ ಬಳಿ ತೆರಳಿ ಪಾದ ಮುಟ್ಟಿ ನಮಸ್ಕರಿಸಲೆಂದು ಬಾಗುತ್ತ, "ಕ್ಷಮಿಸು ತಾಯಿ, ನಿಮ್ಮ ವಿವಾಹ ಮಹೋತ್ಸವದ ಸಂದರ್ಭದಲ್ಲಿ ನಾನು ಕಂದಹಾರ ಪ್ರದೇಶದಲ್ಲಿ ನಡೆದ ಕಾಳಗದಲ್ಲಿ ಭಾಗಿಯಾಗಿದ್ದೆ. ಹೀಗಾಗಿ ತಮ್ಮನ್ನು ಗುರುತಿಸಲಾಗಲಿಲ್ಲ" ಎಂದು ಪಾದಕ್ಕೆ ಕರ ತಾಗಿಸುವಷ್ಟರಲ್ಲಿ ಥಟ್ಟನೆ ತನ್ನ ಕೈಗಳಿಂದ ನನ್ನೆರಡು ಕೈಗಳನ್ನು ಬಿಗಿ ಹಿಡಿದು, "ವಯಸ್ಸಿನಲ್ಲಿ ನಾನು ನಿನಗಿಂತ ಚಿಕ್ಕವಳು. ನಮಸ್ಕಾರ ಮಾಡಬಹುದೆ?" ಎಂದು ಕಣ್ಣುಗಳಲ್ಲಿ ಇಣುಕಿದಳು.

ಹೆಣ್ಣಿಗಿರುವಂತೆ ಪುರುಷನಲ್ಲೂ ಒಂದು ವಿಶಿಷ್ಟ ಪ್ರಜ್ಞೆ ಕೆಲಸ ಮಾಡುತ್ತಿರುತ್ತದೆ. ಸ್ಪರ್ಶ ಹಾಗೂ ನೋಟಗಳ ಇಂಗಿತವನ್ನು ಅರ್ಥ ಮಾಡಿಕೊಳ್ಳುವ ಪ್ರಜ್ಞೆ ಅದು. ಅದೇಕೋ ಚಿಕ್ಕಮ್ಮನ ಸ್ಪರ್ಶದಲ್ಲಿ, ನೋಟದಲ್ಲಿ ಮಾತೃತ್ವದ ಮಮತೆಗಿಂತ ಮೋಹದ ಬಿಸಿಯೆ ನನ್ನ ಅಂತಃಪ್ರಜ್ಞೆಗೆ ತಾಕಿತು. ಹಾಗೆಂದುಕೊಂಡಿದ್ದಕ್ಕೆ ಆ ಕ್ಷಣಕ್ಕೆ ನನ್ನ ಬಗ್ಗೆ ನನಗೇ ನಾಚಿಕೆಯೆನಿಸಿದರೂ ಮುಂದೆ ನಡೆದ ಘಟನೆಗಳು ನನ್ನ ಸಂಶಯಕ್ಕೆ ಪುಷ್ಟಿಯೊದಗಿಸುತ್ತ ನಡೆದವು.

ಪದೇಪದೇ ಏನೇನೊ ನೆಪ ಮಾಡಿ, ನಾನು, ಕಾಂಚನಮಾಲಾ, ಸಂಪ್ರತಿಯಿದ್ದೆಡೆಗೇ ಬರುವುದು, ನನ್ನನ್ನು ನೋಡುತ್ತಾ ಸಂಪ್ರತಿಗೆ ಮುತ್ತನ್ನಿಕ್ಕಿ, "ಎಂಥ ಮೋಹನಾಂಗನೋ ನೀನು, ಚಿನ್ನ, ನಿನ್ನಂಥ ಪತಿಯನ್ನು ಪಡೆಯುವ ಹೆಣ್ಣು ಸಾವಿರ ಜನ್ಮದಲ್ಲಿ ಪುಣ್ಯ ಮಾಡಿರಬೇಕು" ಎನ್ನುವುದು; ಅವಕಾಶ ಕಲ್ಪಿಸಿಕೊಂಡು ಅಂತಃಪುರಕ್ಕೆ ನನ್ನನ್ನು ಆಹ್ವಾನಿಸಿ ಉಪಚರಿಸುವುದು, ಅಕಾರಣವಾಗಿ ಮೇಲುದ ಸರಿಪಡಿಸಿಕೊಳ್ಳುವುದು ಮುಂತಾದವುಗಳನ್ನು ತಿಷ್ಯರಕ್ಷಿತಾ ಮಾಡತೊಡಗಿದಳು. ಇಷ್ಟೇ ಆಗಿದ್ದರೆ ಆಕಸ್ಮಿಕ ಎಂದು ಸುಮ್ಮನಿರಬಹುದಾಗಿತ್ತು. ಆದರೆ, ಒಂದು ದಿನ ಬೆಳಗಿನ ಹೊತ್ತು ಪುಷ್ಪಕೊಳದಲ್ಲಿ ಸ್ನಾನಕ್ಕಿಳಿದಾಗ ಹಿಂದಿನಿಂದ ಬಂದು ಚೇಟಿಯರನ್ನೆಲ್ಲ ದೂರ ಸರಿಸಿ ಶ್ರೀಗಂಧ, ಅರಸಿನವನ್ನು ನನ್ನ ಬೆನ್ನಿಗೆ ಲೇಪಿಸುತ್ತ 'ಕುಣಾಲ' ಎಂದು ಕರೆದಾಗ ಬೆಚ್ಚಿಬಿದ್ದಿದ್ದೆ. ನನ್ನ ಹೆಸರನ್ನು ಕರೆಯುವಾಗಿನ ಮಾದಕತೆಯೇ ಚಿಕ್ಕಅವ್ವನ ಲಜ್ಜಾರಹಿತ, ಅಸಭ್ಯ ನಡವಳಿಕೆಗೆ ಸಾಕ್ಷಿ ನೀಡಿತ್ತು. ಏನೊಂದೂ ಉತ್ತರಿಸದೆ ಅಂಗವಸ್ತ್ರದಿಂದ ಮೈಯೊರೆಸಿಕೊಳ್ಳುತ್ತ ಆಕೆಯ ಸ್ಪರ್ಶದಿಂದ ಅಂಟಿದ ಮೈಲಿಗೆಯನ್ನು ಕಳೆಯಲೆಳಸುತ್ತಾ ಬಿರಬಿರನೆ ಅಲ್ಲಿಂದ ನಡೆದೆ.

ಉರಿವ ಬೆಂಕಿ, ಹರಿವ ಹಾವು, ಕುಪಿತ ರಾಜ, ಸುಪ್ತ ಹುದಲು, ತಪ್ತ ಕಾಮಿನಿಯಿಂದ ಸಾಧ್ಯವಿರುವಷ್ಟು



ದೂರವಿರುವುದೇ ವಿಹಿತ. ಆದರೆ ಈ ಎಲ್ಲ ವಿಷಯವನ್ನು ಕಾಂಚನಮಾಲಾಳಿಗೆ ಎಂತು ತಿಳಿಸಲಿ? ಅವಳೋ ಬೆಳ್ಳಗಿರುವುದನ್ನೆಲ್ಲ ಹಾಲು ಎಂದು ನಂಬುವ ಮುಗ್ಧೆ. ಅವಳ ಮಾನಸ ಸರೋವರದಲ್ಲಿ ಸಲ್ಲದ ಕಲ್ಲೆಸೆದು ಕದಡುವುದು ಬೇಡವಾಗಿತ್ತು ನನಗೆ. ಮನುಷ್ಯ ತಾನು ಗೈವ ಕೆಲಸಗಳಿಂದಲೇ ತನ್ನ ಭವಿಷ್ಯ ರೂಪಿಸಿಕೊಳ್ಳುತ್ತಾನೆ. ಸಮಾಧಿ ತೋಡುವವನು